ಪ್ರತಿರೂಪ, ಹಾವಭಾವ ಎಲ್ಲ! ಅವಳು ತನ್ನ ಮನೆಗೆ ಬರಮಾಡಿಕೊಂಡು ಎದುರು ಮಂಚದ ಮೇಲೆ ಕೂರಿಸಿ ತೋರಿದ ಸಂಭ್ರಮ, ಸಂತಸ, ಆದರ – ಆ ಹಿತಾನುಭವದಲ್ಲೂ ಒಂದು ಬಗೆಯ ಮಧುರ ಯಾತನೆಯ ಸೆಳೆತ...

ಕಾಲ ಎಷ್ಟು ಕ್ರೂರಿ! ಅಥವಾ ಅದರ ಅರಿವಿಲ್ಲದಂತಿರುವ ನಾವು ಹುಂಬರೋ?

ಆನಂದರಾಜು ಬಹಳ ನಿರೀಕ್ಷಿಸಿ ಕೊನೆಗೆ, ''ನಿದ್ದೆ ಬರುತ್ತಿದ್ರೆ ಈಗ ಮಲಿಕೊಳ್ಳೊ ಶಿವರಾಜು. ಇನ್ನೂ ಎರಡು ದಿನ ಇರ್ತಿ. ಕುಂತು ಮಾತಾಡೋಣ'' ಅಂದು ಮಗ್ಗಲು ಹೊರಳಿದ.

ಆನಂದರಾಜು ಮಾತುಗಳು ಕಿವಿಗೆ ಮುಟ್ಟುತ್ತಿದ್ದರೂ ಮನಸ್ಸಿಗಿಳಿದಿರಲಿಲ್ಲ. ಹಿಂದೆ ಬೇಡ ಅನಿಸಿದ್ದನ್ನು ವ್ಯರ್ಜಿಸುವುದು ಒಂದು ಗುಣವಾಗಿತ್ತು. ಆದರೆ ಇಂದು?...

ಮನದ ತುಂಬ ಹೂವಿನ ಹುಡುಗಿಯಲ್ಲಿ ಅದನ್ನು ಬಿತ್ತಿ ಬೆಳೆದವಳ ಭಾವರೂಪ! ಆ ವಿಶಾಲ ಹಜಾರದ ತುಂಬೆಲ್ಲ ಓಡಾಡುತ್ತಿರುವ ಅಂಜಲಿ, ಅಂಜಲಿಯೇ ಗೌರಿಯಾಗಿ ಸುಳಿದಾಡುತ್ತಿರುವ ಭಾವಬಿಂಬ! ವಿಷಾದ ಉಲ್ಲಾಸಗಳ ತೂಗುಯ್ಯಾಲೆಯಲ್ಲಿ ಸ್ಮೃತಿಯ ವರತೆ!

ಓ ಮನಸ್ಸೇ ನೀನೆಂಥ ಸ್ಮೃತಿ ವಿಸ್ಮೃತಿಗಳ ಗೂಡು?

ಹೊರಳಾಟ ಸಾಕೆನಿಸಿ ಎದ್ದೆ. ಕೂತೆ. ಈ ವಿಶಾಲ ಕೊಠಡಿಯೊಳಗೆ ಎಂಥ ಕತ್ತಲೆ? ಆನಂದರಾಜು ನಿರುಂಬಳವಾಗಿ ಮಲಗಿದ್ದ. ಇವನು... ಗೌರಿ... ಎಲ್ಲರೂ ಸ್ಮೃತಿ ಜೊತೆಯೇ ವಹಿವಾಟನ್ನು ಸಹ್ಯ ಮಾಡಿಕೊಂಡವರು!...

ಸ್ಮೃತಿ ಗತಿಸುವುದಿಲ್ಲ.

ಹೊಳೆಯಿತು!

ಸ್ಮೃತಿಯೊಳಗೆ ಶ್ರುತಿ ಹಿಡಿದ ಭಾವ!

ಆ ಕಂಡೇರಿ ದಂಡೆಯ ಮೇಲೆ ಛತ್ರಿಯಂತೆ ಅಗಾಂತರಕ್ಕೆ ಹರಡಿಕೊಂಡ ಹಳದಿ–ಕೆಂಪು ಮಿಶ್ರಿತ ಮುತ್ತುಗದ ಹೂವಿನ ಎಸಳುಗಳೊಳಗೆ ಮಿನುಗುತ್ತಿರುವ ಮಿಂಚುಗಣ್ಣಿನ ರೂಪ! ಅವಳು ಎಷ್ಟು ಉತ್ಕಟವಾಗಿದ್ದಾಳೆ. ಧನ್ಯೆ. ಮೂಗು ಹಿಡಿದು ಕಪಾಳಕ್ಕೆ ಹೊಡೆಯುತ್ತಿದ್ದಾಳೆ... ಚಡ್ಡಿಜೇಬಿಗೆ ಕೈಹಾಕಿ ಬೆಲ್ಲ ಎಗರಿಸಿ ಚಂಗನೆ ಚರಂಡಿ ನೆಗೆದು ಓಡುತ್ತಿದ್ದಾಳೆ...

ಹೀಗೆ ಮತ್ತೆ ಮತ್ತೆ...

★★★

ನಿದ್ದೆ ಒಂದು ವರ. ಆನಂದರಾಜು ಅದರ ಫಲಾನುಭವಿ. ನಾಳೆಯನ್ನು ಹಾಸಿ ಸದ್ಯವನ್ನು ಅನುಭವಿಸುತ್ತಿರುವ ಕುಶಲಿ.


### ಕಾ.ತ. ಚಿಕ್ಕಣ್ಣ

ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕಿನ ಕಾಳಮ್ಮನ ಕೊಪ್ಪಲು ಸ್ವಂತ ಊರು. ಕವನ ಮತ್ತು ನಾಟಕಗಳ ಜೊತೆಗೆ ಕತೆ, ಕಾದಂಬರಿ ಪ್ರಕಾರಗಳಲ್ಲಿ ಹೆಚ್ಚು ಬರೆದಿದ್ದಾರೆ. ಗ್ರಾಮೀಣ, ನಗರ ಜೀವನಗಳಲ್ಲಿ ಕಾಣುವ ವೈವಿಧ್ಯ ಮತ್ತು ಸಂಘರ್ಷಗಳನ್ನು ಸರಳವಾಗಿ, ರೂಪಕಾತ್ಮಕವಾಗಿ ಅವರ ಗದ್ಯ ಬರಹಗಳು ಅಭಿವ್ಯಕ್ತಿಸುತ್ತವೆ. ಎರಡು ಕವನ ಸಂಕಲನ, ಎಂಟು ಕಥಾಸಂಕಲನ, ಮೂರು ಕಾದಂಬರಿ, ಎರಡು ನಾಟಕಗಳು, ಒಂದು ಪ್ರಬಂಧ ಸಂಕಲನ ಹಾಗೂ ಸಂಪಾದಿತ ಕೃತಿಗಳು ಸೇರಿದಂತೆ 35ಕ್ಕೂ ಹೆಚ್ಚಿನ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾಗಿ ನಿವೃತ್ತಿ ಹೊಂದಿರುವ ಚಿಕ್ಕಣ್ಣ ಅವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ.